ಶ್ರೀ ಧರ್ಮಸಿಂಗ್ : ಬೇರೆ ರಾಜ್ಯಗಳಲ್ಲೂ ಹೈಲಿ ಪ್ರೊಫೆಷನಲ್ಸ್ ಡಕಾಯಿತರು ಇದ್ದು ಅಲ್ಲಿಯೂ ರಸ್ತೆ ದರೋಡೆಗಳು ನಡೆಯುತ್ತಿವೆ. ನಮ್ಮ ರಾಜ್ಯದ ಬಾರ್ಡರ್ ಜಿಲ್ಲೆಗಳಾದ ಬಳ್ಳಾರಿ, ಬೀದರ್, ಗುಲ್ಬರ್ಗಾ ಮತ್ತು ಕೋಲಾರದಲ್ಲಿ ಸ್ವಲ್ಪ ಆಗುತ್ತಾ ಇತ್ತು ಆದರೆ ಕೋಲಾರದಲ್ಲಿ ಇತ್ತೀಚಿನ ದಿವಸಗಳಲ್ಲಿ ಹೆಚ್ಚಾಗಿದೆ. ಇದನ್ನು ನಿಯಂತ್ರಣ ಮಾಡತಕ್ಕ ರೀತಿಯಲ್ಲಿ ನಾವು ಕೆಲಸ ಮಾಡುತ್ತಾ ಇದ್ದೇವೆ.

ಮಂಗಳೂರಿನಲ್ಲಿ ಪ್ರಾದೇಶಿಕ ಪಾಸ್‌ಪೋರ್ಟ್ ಕಛೇರಿ

3162 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಂಗಳೂರಿನಲ್ಲಿ ಪ್ರಾದೇಶಿಕ ಪಾಸ್‌ಪೋರ್ಟ್ ಕಛೇರಿಯನ್ನು ತೆರೆಯಲು ಕೇಂದ್ರ ಸರ್ಕಾರವನ್ನು ಸರ್ಕಾರವು ಕೋರಿದೆಯೇ?

2) ಹಾಗಿದ್ದಲ್ಲಿ ಈ ಬಗೆಗೆ ಭಾರತ ಸರ್ಕಾರದ ಪ್ರತಿಕ್ರಿಯೆ ಏನು?

ಶ್ರೀ ಧರ್ಮಸಿಂಗ್ (ಗೃಹಸಚಿವರು) :

1) ಇಲ್ಲ

2) ಪ್ರಶ್ನೆ (1) ಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ ನಾವು ನಿರೀಕ್ಷಿಸಿದ ಉತ್ತರ ಇಲ್ಲಿ ಬಂದಿದೆ. ಕರಾವಳಿ ಭಾಗದಲ್ಲಿ ಹೆಚ್ಚಿನ ಜನರು ಗಲ್ಫ್ ಹಾಗೂ ಮತ್ತಿತರ ಕಡೆ ಹೆಚ್ಚು ಪ್ರಮಾಣದಲ್ಲಿ ಹೋಗುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಪಾಸ್‌ಪೋರ್ಟ್ ಆಫೀಸ್ ತೆರೆದರೆ ಉತ್ತಮವಾಗುತ್ತದೆಂದು ಜನರ ಬೇಡಿಕೆ ಇದೆ. ಅಲ್ಲದೇ ಎಲ್ಲಾ ವ್ಯವಹಾರ ಇಲ್ಲಿಂದ ಆಗಬೇಕಾದರೆ ಕನಿಷ್ಟ ಪಕ್ಷ 2 ತಿಂಗಳಾದರೂ ತಗಲುತ್ತದೆ. ಆದ್ದರಿಂದ 10-15 ದಿವಸಗಳ ಒಳಗೆ ಪಾಸ್‌ಪೋರ್ಟ್ ಸಿಗುವಹಾಗೆ ಏರ್ಪಾಡು ಮಾಡುವ ಸಲುವಾಗಿ ಮಂಗಳೂರಿನಲ್ಲಿ ಒಂದು ಪಾಸ್‌ಪೋರ್ಟ್ ಆಫೀಸ್ ತೆರೆದರೆ ಉತ್ತಮ ಎಂದು ನಾನು ಹೇಳುತ್ತೇನೆ.

ಶ್ರೀ ಧರ್ಮಸಿಂಗ್ : ಇದು ರಾಜ್ಯ ಸರ್ಕಾರಕ್ಕೆ ಬರುವುದಿಲ್ಲ ಮಾನ್ಯ ಸದಸ್ಯರ ಭಾವನೆಯನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿ ಆದಷ್ಟು ಬೇಗ ಈ ಬಗ್ಗೆ ಗಮನಹರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಈಗ ಶ್ರೀ ಎಂ.ಪಿ. ವೆಂಕಟೇಶ್ ಅವರ ಪ್ರಶ್ನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ನಮಗೆ ಯಾವುದೇ ಪ್ರಶ್ನೆಗೂ ಇಲ್ಲಿ ಉತ್ತರ ಬಂದಿಲ್ಲ ಈ ಕಡೆಯ ಯಾವ ಸದಸ್ಯರಿಗೂ ಬಂದಿಲ್ಲ ಮತ್ತೆ ಪತ್ರಕರ್ತರಿಗೂ ಕೂಡಾ ಉತ್ತರ ಹೋಗಿಲ್ಲ. I seek your guidance in this.

ಅಧ್ಯಕ್ಷರು : ಸರ್ಕಾರದವರು ಉತ್ತರಗಳನ್ನು ಕಳುಹಿಸಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಬಗ್ಗೆ ಏನಾದರೂ ಸಂಪ್ರದಾಯ ಮಾಡಬೇಕು. ಸಂಸತ್ತಿನಲ್ಲಿ ಪ್ರಶ್ನೋತ್ತರ ಕಾಲಕ್ಕೆ ಒಂದು ಗಂಟೆ ಮುಂಚೆ ಉತ್ತರವನ್ನು ನೋಟೀಸ್ ಆಫೀಸಿನಲ್ಲಿ ಇಡುತ್ತಾರೆ. ಆದ್ದರಿಂದ ಸದಸ್ಯರಿಗೆ ತಮ್ಮ ಸಪ್ಲಿಮೆಂಟರಿಯನ್ನು ಹಾಕುವುದಕ್ಕೆ ಸಹಾಯವಾಗುತ್ತದೆ. ಆದರೆ ಇಲ್ಲಿ ಸದನಕ್ಕೆ ಬಂದಾಗ ಕೊಡುತ್ತಾರೆ. ಇಲ್ಲಿ ಉತ್ತರ ಬರದೇ ಇದ್ದರೆ ಸಪ್ಲಿಮೆಂಟರಿ ಕೇಳುವುದು ಹೇಗೆ?

ಅಧ್ಯಕ್ಷರು : ಈಗ ಬರುತ್ತಾ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಕೇಳಿದಮೇಲೆ ಬರುವುದಾದರೆ ಹೇಗೆ? ಏನಾದರೂ ಸಂಪ್ರದಾಯವನ್ನು ತಾವು ಮಾಡಬೇಕು.

ಅಧ್ಯಕ್ಷರು : ಸರ್ಕಾರದವರು ಒಂದು ಗಂಟೆ ಮುಂಚೆ ನಮಗೆ ಕಳುಹಿಸಬೇಕು ತಾನೆ?

ಶ್ರೀ ಎಸ್.ಹೆಚ್. ಕೌಜಲಗಿ : ನಮ್ಮ ಅನ್‌ಸ್ಟಾರ್ಡ್ ಪ್ರಶ್ನೆಗಳಿಗೂ ಉತ್ತರ ಒಟ್ಟಾಗಿ ಬರುವುದಿಲ್ಲ ನಿನ್ನೆ ಮೊನ್ನೆ ಅಷ್ಟಷ್ಟು ಬಂದಿವೆ.

ಶ್ರೀ ಎಸ್.ಎಂ. ಯಾಹ್ಯಾ : ಮಾನ್ಯ ಅಧ್ಯಕ್ಷರೆ ಹಳೆಯ ಪದ್ಧತಿಯೇ ಬಹಳ ಉತ್ತಮವಾಗಿತ್ತು ಎಂದು ಕಾಣಿಸುತ್ತದೆ ಏಕೆಂದರೆ ಕೆಲವು ಸಂದರ್ಭಗಳಲ್ಲಿ ಉತ್ತರಗಳು ಸಿಕ್ಕುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ಉತ್ತರಗಳು ಸಿಕ್ಕುವುದಿಲ್ಲ ಹಳೆಯ ಪದ್ಧತಿ ಏನಿತ್ತು ಎಂದರೆ ಪ್ರಶ್ನೆ ಮತ್ತು ಅದರ ಕೆಳಗೇ ಉತ್ತರಗಳೂ ಇರುತ್ತಿದ್ದುವು ಆದ್ದರಿಂದ ಎಲ್ಲ ಮಾನ್ಯ ಸದಸ್ಯರಿಗೂ ಸಹಾಯವಾಗುತ್ತಿತ್ತು. ಆದ್ದರಿಂದ ಮತ್ತು ಹಳೆಯ ಪದ್ಧತಿಯನ್ನೇ ಜಾರಿಗೆತರುವುದು ಉತ್ತಮ ಎಂದು ನಾನು ಅಂದುಕೊಂಡಿದ್ದೇನೆ.

ಅಧ್ಯಕ್ಷರು : ಇದನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ

ಸಿದ್ದಾಪುರ ಮಂಡಲ ಪಂಚಾಯಿತಿಯಲ್ಲಿ ರಾಷ್ಟ್ರ ಧ್ವಜಕ್ಕೆ ಅವಮಾನ

3239 - ಶ್ರೀ ಗೋಪಾಲ ಮುಕುಂದ ಕನಾಡೆ (ಸಿರ್ಸಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿದ್ದಾಪುರ ಮಂಡಲ ಪಂಚಾಯತದಲ್ಲಿ ಕಳೆದ ಸ್ವಾತಂತ್ರೋತ್ಸವ ಸಮಾರಂಭದಲ್ಲಿ ರಾಷ್ಟ್ರಧ್ವಜವನ್ನು ತಲೆಕೆಳಕಾಗಿ ಹಾರಿಸಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಈ ಬಗ್ಗೆ ಸಂಭಂದಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಹೌದು

ಆ) ರಾಷ್ಟ್ರಧ್ವಜವನ್ನು ಆ ರೀತಿ ತಲೆಕೆಳಕಾಗಿ ಹಾರಿಸಿದ್ದು ಮುನ್ನೆಚರಿಕೆಯಿಲ್ಲದೆ ಮಾಡಿದ ತಪ್ಪಾಗಿದ್ದು ಅದನ್ನು ಕೂಡಲೇ ಸರಿಪಡಿಸಲಾಯಿತೆಂದು ವರದಿಯಾಗಿದೆ. ಆದರೂ ಸಂಭಂದಪಟ್ಟ ನೌಕರರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಗೋಪಾಲ ಮುಕಂದ ಕಾನಡ್ : ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಕೊಟ್ಟಿದ್ದಾರೆ. ಕ್ರಮ ಎಂದರೆ ಅವರನ್ನು ಅಮಾನತ್ತಿನಲ್ಲಿ ಇಡುತ್ತಾರೆಯೆ?

ಶ್ರೀ ಎಸ್. ಬಂಗಾರಪ್ಪ : ಬಾವುಟವನ್ನು ಹಾಕುವಾಗ ಅದನ್ನು ಸ್ವಲ್ಪ ಹೆಚ್ಚೂ ಕಡಿಮೆ ಹಾಕಿದ್ದರು ಎನ್ನುವ ಬಗ್ಗೆ ಬಂದಿರತಕ್ಕ ದೂರು ಇದರ ಬಗ್ಗೆ ವಿವರಗಳನ್ನು ನಾವು ತರಿಸಬೇಕಾಗುತ್ತದೆ ಏಕೆಂದರೆ ಬಾವುಟವನ್ನು ತಿರುಗುಮುರುಗು ಮಾಡಿ ಹಾಕಿದ್ದರೂ ಕೂಡ ತಪ್ಪಾಗುತ್ತದೆ. ತಪ್ಪು ತಪ್ಪೇ ಆರೀತಿ ಏತಕ್ಕೆ ಹಾಕಿದರು ಎನ್ನ ತಕ್ಕ ಬಗ್ಗೆ ವಿವರಗಳನ್ನು ತರಿಸಿಕೊಂಡು ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಈಗಾಗಲೇ ತಿಳಿಸಿದ್ದೇವೆ ಮತ್ತು ಉತ್ತರದಲ್ಲಿಯೂ ಕೂಡ ನಾವು ಕೊಟ್ಟಿರತಕ್ಕದ್ದು ಸರಿಯಾಗಿದೆ.